ಕರ್ನಾಟಕ ಸರ್ಕಾರ
ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ
ಕರ್ನಾಟಕ ಸರ್ಕಾರದ ಸಚಿವಾಲಯ, 7ನೇ ಮಹಡಿ, 4ನೇ ಗೇಟ್, ಬಹುಮಹಡಿ ಕಟ್ಟಡ, ಡಾ|| ಅಂಬೇಡ್ಕರ್ ವೀದಿ, ಬೆಂಗಳೂರು-560 001
ದೂರವಾಣಿ: 080-2203 2013, ಇ-ಮೇಲ್: visiongroup.st@gmail.com, ವೆಬ್‌ಸೈಟ್: www.vgst.in

ಸಂಖ್ಯೆ: ವಿತಂದಾಸ/ಅನುಮೋದನೆ ಪತ್ರ/ಜಿ.ಆರ್.ಡಿ ಸಂಖ್ಯೆ: 931/2020-21 | 191 ದಿನಾಂಕ: 21.12.2021

ಇವರಿಗೆ,
ಪ್ರಾಂಶುಪಾಲರು,
ಆಳ್ವಾ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ,
ಶೋಭಾವನ ಕ್ಯಾಂಪಸ್, ಮಿಜಾರ್, ಮೂಡುಬಿದಿರೆ,
ದಕ್ಷಿಣ ಕನ್ನಡ - 574 225.

ಮಾನ್ಯರೆ,

ವಿಷಯ: CISEE ಯೋಜನೆಯಡಿಯಲ್ಲಿ ಆಯ್ಕೆಯಾಗಿರುವ ಫಲಾನುಭವಿ ವಿದ್ಯಾಸಂಸ್ಥೆಗಳಿಗೆ ಮೊದಲನೇ ಕಂತಿನ ಅನುದಾನದಿಂದ ಉಪಕರಣಗಳ/ವಸ್ತುಗಳ (ಪಾರ್ಟ್-ಎ) ಖರೀದಿಗೆ (ಜಿ.ಆರ್.ಡಿ- 931) ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: 1.ಸೂಚನೆ ಪತ್ರ ಸಂಖ್ಯೆ: ಕೆಸ್ಟೆಪ್ಸ್/ ವಿತಂದಾಸ /CISEE/GRD No.931/2020-21/75
ದಿನಾಂಕ: ಆಗಸ್ಟ್ 26, 2021
2. ತಮ್ಮ ಸಂಸ್ಥೆಯಿಂದ ದಾಖಲೆಗಳನ್ನು ಸಲ್ಲಿಸಿದ ದಿನಾಂಕ:06-09-2021.
3.ಮೊದಲನೇ ಕಂತಿನ ಅನುದಾನ ಬಿಡುಗಡೆಯ ಪತ್ರದ ಸಂಖ್ಯೆ:KSTePS/VGST/2020-21/CISEE/GRD- 931/09/2021-22/774 ದಿನಾಂಕ: 29-10-2021.

*****

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ವಿಜ್ಞಾನ ಹಾಗೂ ತಂತ್ರಜ್ಞಾನ ದಾರ್ಶನಿಕ ಸಮೂಹ (ವಿತಂದಾಸ) ದ ವಿವಿಧ ಯೋಜನೆಗಳಲ್ಲೊಂದಾದ CISEE ಕಾರ್ಯಕ್ರಮದಡಿ 2020-21ನೇ ಸಾಲಿನಲ್ಲಿ ಆಯ್ಕೆಯಾಗಿದ್ದ **ಡಾ|| ಶಶಿಕುಮಾರ್ ಕೆ, ಎಂಜಿನಿಯರಿಂಗ್ ಭೌತಶಾಸ್ತ್ರ ವಿಭಾಗ, ಆಳ್ವಾ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ, ದಕ್ಷಿಣ ಕನ್ನಡ** (ಜಿ.ಆರ್.ಡಿ- 931) ರವರು ಸಲ್ಲಿಸಿದ್ದ **"Monitoring Food Adulteration in Liquid Dietary Produce Using Earth's Field Nuclear Magnetic Resonance (EFNMR) Spectroscopy as a Non-Destructive Testing (NDT) Tool"** ಶೀರ್ಷಿಕೆಯ ಪ್ರಸ್ತಾವನೆಗೆ ಮೊದಲನೇ ಕಂತಿನ ಅನುದಾನವಾಗಿ ರೂ. 15,00,000/- ಗಳನ್ನು RTGSನ ಮೂಲಕ ಬಿಡುಗಡೆ ಮಾಡಲಾಗಿರುವುದು ಸರಿಯಷ್ಟೆ.

ಈ ನಿಟ್ಟಿನಲ್ಲಿ, ವಿತಂದಾಸದ ವಿಮರ್ಶಾ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಮತ್ತು ಯೋಜನಾ ಸಂಯೋಜಕರು ಮೊದಲನೇ ಕಂತಿನ ಅನುದಾನಕ್ಕೆ ಸಲ್ಲಿಸಿದ್ದ PART-A ದಾಖಲೆಗೆ ಅನುಗುಣವಾಗಿ ರೇಕರಿಂಗ್ ಮತ್ತು ನಾನ್-ರೇಕರಿಂಗ್ ವಸ್ತುಗಳ ಅಡಿಯಲ್ಲಿ ಉಪಕರಣಗಳು / ವಸ್ತುಗಳ ಖರೀದಿಗೆ ಅನುಮೋದನೆಯನ್ನು ಈ ಕೆಳಗಿನಂತೆ ನೀಡಲಾಗಿದೆ:

PRINCIPAL
Alva's Institute of Engg. & Technology,
Mijar, MOODBIDRI - 574 225, D.K

Scanned with CamScanner

Table 1: PART-A ಪ್ರಕಾರ ನಾನ್-ರೇಕರಿಂಗ್ ಮತ್ತು ರೇಕರಿಂಗ್ ವಿವರಗಳ ಪಟ್ಟಿ ಈ ಕೆಳಗಿನಂತಿವೆ

| ಕ್ರಮ ಸಂಖ್ಯೆ | ವಿವರಗಳು<br>ನಾನ್-ರೇಕರಿಂಗ್ | ಒಟ್ಟು ಪ್ರಮಾಣ | ವಿತಂದಾಸದಿಂದ ಅನುಮೋದನೆ ನೀಡಿದ ಮೊತ್ತ (ರೂ. ಗಳಲ್ಲಿ) |
|---|---|---|---|
| | ಇ-ಟೆಂಡರ್ | | |
| 1 | UV-VIS NIR Spectrometer (Double validation of EFNMR as Food adulteration monitoring tool ) | 01 | 9,00,000 |
| 2 | Glove Box (Inert storage space for dry liquid produce samples of longer shelf life viz., oils, syrups, honey etc.) | 01 | 2,30,000 |
| | A) ಇ-ಟೆಂಡರ್ ಮೊತ್ತ | | 11,30,000.00 |
| | ಮಾನ್ಯುಯಲ್ ಟೆಂಡರ್ | | |
| 3 | Refrigerator (Inert storage space for wet liquid produce samples of shorter shelf life viz., Milk, Clarified Butter, Cream etc.) | 01 | 31,000 |
| 4 | Desktop Computer Workstation with monitor (For EFNMR/MRI data acquisition and processing) | 01 | 99,000 |
| 5 | Hot Air Oven (Homogenous heating of the samples and dry estimation of adulterants) | 01 | 50,000 |
| 6 | Magnetics Stirrer Ceramic Hot Plate(Homogenizing samples before EFNMR measurement) | 01 | 20,000 |
| 7 | Micro-pipette with disposable tips (Used in samples preparation for EFNMR experiment) | 02 | 20,000 |
| | B) ಮಾನ್ಯುಯಲ್ ಟೆಂಡರ್ ಮೊತ್ತ | | 2,20,000.00 |
| | ಒಟ್ಟು ನಾನ್-ರೇಕರಿಂಗ್ ಮೊತ್ತ (A+B) | | 13,50,000.00 |
| | ರೇಕರಿಂಗ್ ಪಟ್ಟಿ | | |
| 1 | Chemicals/Glassware/plastic ware/ Biological specimens | | 90,000 |
| 2 | Electrical & Electronics spare parts | | 11,250 |
| 3 | Mechanical spare parts | | 11,250 |
| 4 | Contingency | | 30,000 |
| 5 | Books and Journal | | 7,500 |
| | ಒಟ್ಟು ರೇಕರಿಂಗ್ ಮೊತ್ತ | | 1,50,000.00 |
| | ಒಟ್ಟು ನಾನ್-ರೇಕರಿಂಗ್ ಮತ್ತು ರೇಕರಿಂಗ್ ಮೊತ್ತ | | 15,00,000.00 |

Table 2: ನಾನ್-ರೇಕರಿಂಗ್ ಮತ್ತು ರೇಕರಿಂಗ್ ವಿವರಗಳಿಗೆ ಅನುಮೋದನೆ ಈ ರೀತಿ ನೀಡಲಾಗಿದೆ:

| | ವಿವರಗಳು | ಮೊತ್ತ (ರೂ. ಗಳಲ್ಲಿ) |
|---|---|---|
| i) | ಹಂಚಿಕೆಯಾದ ಮೊದಲನೇ ಕಂತಿನ ಅನುದಾನದ ಮೊತ್ತ | 15,00,000.00 |
| ii) | ಮೊದಲನೇ ಕಂತಿಗೆ ಬಿಡುಗಡೆ ಮಾಡಲಾದ ಅನುದಾನದ ಮೊತ್ತ | 15,00,000.00 |

| | |
|---|---|
| a) ನಾನ್ ರೇಕರಿಂಗ್ ಒಟ್ಟು ವೆಚ್ಚ | 13,50,000.00 |
| b) ರೇಕರಿಂಗ್ ಒಟ್ಟು ವೆಚ್ಚ | 1,50,000.00 |
| ಫಾರ್ಟ್-ಎ ಗಾಗಿ ವಿತಂದಾಸದಿಂದ ಅನುಮೋದಿತಗೊಂಡ ಮೊತ್ತ ಒಟ್ಟು (a) + (b) | 15,00,000.00 |

PRINCIPAL
Alva's Institute of Engg. & Technology,
Mijar, MOODBIDRI - 574 225, D.K

Scanned with CamScanner

ಯೋಜನೆಯ ಅನುಷ್ಠಾನಕ್ಕೆ ಅನುದಾನವನ್ನು ಬಳಸುವಾಗ ಈ ಕೆಳಕಂಡ ಅಂಶಗಳನ್ನು ಅನುಸರಿಸಲು ಕೋರಲಾಗಿದೆ:

1) ಉದ್ದೇಶಿತ ಯೋಜನೆ/ಕಾರ್ಯಕ್ರಮವನ್ನು ತಮ್ಮ ಸಂಸ್ಥೆಯಿಂದಾಗಲೀ ಅಥವಾ ಬೇರೆ ಸಂಸ್ಥೆಗಳ ಮುಖಾಂತರವಾಗಲೀ ಅನುಷ್ಠಾನಗೊಳಿಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ - 1999 ಮತ್ತು ನಿಯಮಗಳು 2000 (KTPP Act - 1999 & Rules - 2000), ಕರ್ನಾಟಕ ಆರ್ಥಿಕ ಸಂಹಿತೆ (KFC) ಹಾಗೂ ಕರ್ನಾಟಕ ಸರ್ಕಾರದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಮತ್ತು ಕಡ್ಡಾಯವಾಗಿ ಅನುಸರಿಸುವುದು/ ಪಾಲಿಸುವುದು.

2) ಉದ್ದೇಶಿತ ಯೋಜನೆಯ ಅನುಷ್ಠಾನಕ್ಕೆ ಬಿಡುಗಡೆಯಾಗುವ ಅನುದಾನದಿಂದ ಅನುಮೋದಿತ ಪಾರ್ಟ್-ಎ (Part-A) ನಲ್ಲಿ ನಮೂದಿತವಾಗಿರುವ ಯಂತ್ರಗಳನ್ನು ಮಾತ್ರ ಖರೀದಿಸುವುದು ಇದರಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.

3) ರೂ.1. ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಬೆಲೆಯ ಉಪಕರಣಗಳನ್ನು ಇ-ಟೆಂಡರ್ ಮೂಲಕ ಮಾತ್ರ ಖರೀದಿಸತಕ್ಕದ್ದು. ರೂ.1. ಲಕ್ಷಕ್ಕಿಂತ ಕಡಿಮೆ ಬೆಲೆಯ ಉಪಕರಣಗಳನ್ನು ಮಾನ್ಯುಯಲ್ ಟೆಂಡರ್ ಮೂಲಕ ಖರೀದಿಸ ಬಹುದು

4) ಫಲಾನುಭವಿ ಸಂಸ್ಥೆಗೆ ಬಿಡುಗಡೆ ಮಾಡುವ ಅನುದಾನವನ್ನು ಅಗತ್ಯಕ್ಕೆ ಅನುಗುಣವಾಗಿ ನೀಡಲಾದ ಉದ್ದೇಶಕ್ಕೆ ಮಾತ್ರ ಬಳಸುವುದು ಹಾಗೂ ಸದರಿ ಅನುದಾನಕ್ಕೆ ಬರುವ ಬ್ಯಾಂಕ್ ಬಡ್ಡಿ ಮೊತ್ತವನ್ನು ಯಾವುದೇ ಕಾರಣಕ್ಕೂ ಉದ್ದೇಶಿತ ಯೋಜನೆಯ ಅನುಷ್ಠಾನಕ್ಕೆ ಬಳಸಿಕೊಳ್ಳಲು ಅನುಮತಿ/ಅವಕಾಶವಿರುವುದಿಲ್ಲ. ಈ ಬಡ್ಡಿಯ ಮೊತ್ತವನ್ನು ಉಪಯೋಗಿತ ಪ್ರಮಾಣ - ಪತ್ರದೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್ ರವರ ಹೆಸರಿನಲ್ಲಿ ಚೆಕ್ / ಡಿ.ಡಿ. ಮೂಲಕ ಹಿಂತಿರುಗಿಸುವುದು.

5) ತಮ್ಮ ವಿದ್ಯಾಸಂಸ್ಥೆಗೆ ಸದರಿ ಕಾರ್ಯಕ್ರಮದ ಅನುಷ್ಠಾನಕ್ಕೆ ಬಿಡುಗಡೆ ಮಾಡುತ್ತಿರುವ ಮೊದಲನೇ ಕಂತಿನ ಅನುದಾನದಲ್ಲಿ ಬಳಕೆಯಾಗದೆ ಉಳಿಕೆಯಾಗುವ ಮೊತ್ತವನ್ನು ಮುಂದಿನ ಕಂತಿನ ಅನುದಾನಲ್ಲಿ ಕಡಿತಗೊಳಿಸಿ ಉಳಿದ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

6) ಯೋಜನೆಯನ್ನು ಕಾರ್ಯಗತಗೊಳಿಸುವಾಗ ಸರ್ಕಾರದ ಎಲ್ಲಾ ಮಾರ್ಗಸೂಚಿಗಳು, ನಿಯಮಗಳು ಮತ್ತು ಷರತ್ತುಗಳನ್ನು ಕಟ್ಟುನಿಟ್ಟಾಗಿ ಅನುಸರಿಸತಕ್ಕದ್ದು.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ಡಾ|| ರೋಹಿತ್ ಕುಮಾರ್ .ಹೆಚ್. ಜಿ

ವಿಜ್ಞಾನಿ-ಎಸ್.ಡಿ. ಕೆಸ್ಟೆಪ್ಸ್ /ಸಂಯೋಜಕರು.ವಿತಂದಾಸ

ಪ್ರತಿ:

1)ಡಾ|| ಶಶಿಕುಮಾರ್ ಕೆ, ಹಿರಿಯ ಸಹಾಯಕ ಪ್ರಾಧ್ಯಾಪಕರು, ಎಂಜಿನಿಯರಿಂಗ್ ಭೌತಶಾಸ್ತ್ರ ವಿಭಾಗ, ಆಳ್ವಾ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ, ಶೋಭಾವನ ಕ್ಯಾಂಪಸ್, ಮಿಜಾರ್, ಮೂಡುಬಿದಿರೆ, ದಕ್ಷಿಣ ಕನ್ನಡ - 574 225.

2) ಡಾ|| ರಾಮಪ್ರಸಾದ್. ಎ. ಟಿ, (Co-PI) ಹಿರಿಯ ಸಹಾಯಕ ಪ್ರಾಧ್ಯಾಪಕರು, ಎಂಜಿನಿಯರಿಂಗ್ ಭೌತಶಾಸ್ತ್ರ ವಿಭಾಗ, ಆಳ್ವಾ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ, ಶೋಭಾವನ ಕ್ಯಾಂಪಸ್, ಮಿಜಾರ್, ಮೂಡುಬಿದಿರೆ, ದಕ್ಷಿಣ ಕನ್ನಡ - 574 225.

PRINCIPAL
Alva's Institute of Engg. & Technology,
Mijar, MOODBIDRI - 574 225, D.K

Scanned with CamScanner

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ

ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.
ಕರ್ನಾಟಕ ಸರ್ಕಾರ
'ವಿಜ್ಞಾನ ಭವನ' ನಂ. 24/2, 3ನೇ ಮಹಡಿ, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560070
ದೂರವಾಣಿ: 080-26711166 ಇ-ಮೇಲ್: ksteps.dst@gmail.com


ನಂ. KSTePS/VGST/2020-21/CISEE/GRD-931/09/2021-22/774 ದಿನಾಂಕ: 29.10.2021

ಮಾನ್ಯರೇ,

**ವಿಷಯ:** ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ **CISEE** ಯೋಜನೆಯಡಿಯಲ್ಲಿ ಮೊದಲನೇ ಕಂತಿನ ಅನುದಾನ ಬಿಡುಗಡೆ ಮಾಡಿರುವ ಬಗ್ಗೆ.

*******

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು, ಖ್ಯಾತ ವಿಜ್ಞಾನಿ ಭಾರತರತ್ನ ಪ್ರೊಫೆಸರ್ ಸಿ.ಎನ್.ಆರ್. ರಾವ್, F.R.S. ರವರ ಅಧ್ಯಕ್ಷತೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ (ವಿತಂದಾಸ) ವನ್ನು 2008ರಲ್ಲಿ ಸ್ಥಾಪಿಸಿದ್ದು, ಈ ಯೋಜನೆಯಡಿ ಹಲವಾರು ವೈಜ್ಞಾನಿಕ ಕಾರ್ಯಕ್ರಮಗಳನ್ನು ಕಳೆದ 12 ವರ್ಷಗಳಿಂದ ರಾಜ್ಯಾದ್ಯಂತ ಯಶಸ್ವಿಯಾಗಿ ಅನುಷ್ಠಾನಗೊಳಿಸಿಕೊಂಡು ಬರುತ್ತಿರುವುದು ಸರಿಯಷ್ಟೆ. 2020-21ನೇ ಸಾಲಿನಲ್ಲಿ ತಮ್ಮ ಸಂಸ್ಥೆಯಿಂದ ಸಲ್ಲಿಸಿದ ಪ್ರಸ್ತಾವನೆಯಾದ **"Monitoring Food Adulteration in liquid Dietary Produce Using Earth's Field Nuclear Magnetic Resonance (EFNMR) Spectroscopy as a Non-Destructive Testing (NDT) Tool"** ನ್ನು ವಿತಂದಾಸದ ಪ್ರಮುಖ ಕಾರ್ಯಕ್ರಮವಾದ **Centres of Innovative Science, Engineering and Education (CISEE)** ಅಡಿಯಲ್ಲಿ ದಾರ್ಶನಿಕ ಸಮೂಹವು ಆಯ್ಕೆ ಮಾಡಿ, ಸರ್ಕಾರ ಆದೇಶ ನೀಡಿರುವುದು ತಮಗೆ ತಿಳಿದ ವಿಷಯವಾಗಿದೆ.

ಆದುದರಿಂದ, ತಮ್ಮ ಸಂಸ್ಥೆಯಿಂದ ಆಯ್ಕೆಗೊಂಡ ಪ್ರಸ್ತಾವನೆಗೆ ಮೊದಲನೇ ಕಂತಾಗಿ ರೂ. 15,00,000/-ಗಳ ಅನುದಾನವನ್ನು ಕೆಸ್ಟೆಪ್ಸ್‌ನಿಂದ **Alva's Institute of Engineering and Technology** ಹೆಸರಿನ ಬ್ಯಾಂಕ್ ಖಾತೆಗೆ **(UTR No. SBINR52021100444986244) RTGS** ಮೂಲಕ ದಿನಾಂಕ: 04.10.2021 ರಂದು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಅನುದಾನವನ್ನು ಸ್ವೀಕರಿಸಿದ ನಂತರ, ಸ್ವೀಕೃತ ರಶೀದಿ **(Acknowledgement)** ಯನ್ನು ಕೆಸ್ಟೆಪ್ಸ್ ಸಂಸ್ಥೆಗೆ ಕಳುಹಿಸುವುದು.

ಮುಂದುವರೆದು, ಪ್ರಸ್ತುತ ಬಿಡುಗಡೆ ಮಾಡುತ್ತಿರುವ 1ನೇ ಕಂತಿನ ಅನುದಾನಕ್ಕೆ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳನ್ವಯ ಉದ್ದೇಶಿತ ಯೋಜನೆಗೆ ಮಾತ್ರ ಬಳಸಿಕೊಳ್ಳುವುದು.

**ಷರತ್ತು ಮತ್ತು ನಿಬಂಧನೆಗಳು:**

ಅ) ನಿಗದಿತ ನಮೂನೆಯಲ್ಲಿರುವಂತೆ ಪ್ರಾಯೋಜಕತ್ವದ ಸಂಸ್ಥೆ/ಇಲಾಖೆಯ ಹೆಸರನ್ನು ಫಲಾನುಭವಿ ಸಂಸ್ಥೆಗಳಲ್ಲಿ ಸ್ಥಾಪಿಸಲಾಗಿರುವ ವಿತಂದಾಸದ ಸಂಶೋಧನಾ/ಬೋಧನಾ ಕೇಂದ್ರಗಳಲ್ಲಿ ಕಡ್ಡಾಯವಾಗಿ ಬೋರ್ಡ್ (ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ) ಅನ್ನು ಅಳವಡಿಸುವುದು.

...2

Scanned with CamScanner

ಆ) ಉದ್ದೇಶಿತ ಯೋಜನೆ/ಕಾರ್ಯಕ್ರಮವನ್ನು ತಮ್ಮ ಸಂಸ್ಥೆಯಿಂದಾಗಲೀ ಅಥವಾ ಬೇರೆ ಸಂಸ್ಥೆಗಳ ಮುಖಾಂತರವಾಗಲೀ ಅನುಷ್ಠಾನಗೊಳಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ -1999 ಮತ್ತು ನಿಯಮಗಳು 2000 **(KTPP Act-1999 & Rules-2000)** ಕರ್ನಾಟಕ ಆರ್ಥಿಕ ಸಂಹಿತೆ **(KFC)** ಹಾಗೂ ಕರ್ನಾಟಕ ಸರ್ಕಾರದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಕಡ್ಡಾಯವಾಗಿ ಅನುಸರಿಸುವುದು/ಪಾಲಿಸುವುದು.

ಇ) ಪ್ರತಿ 3 ತಿಂಗಳಗೊಮ್ಮೆ ಕಡ್ಡಾಯವಾಗಿ ಉದ್ದೇಶಿತ ಯೋಜನೆಯ ಅನುಷ್ಠಾನದ ಪ್ರಗತಿಯ ವರದಿಯನ್ನು ಸೂಕ್ತ ದಾಖಲೆಗಳೊಂದಿಗೆ ವಿತಂದಾಸಕ್ಕೆ ಸಲ್ಲಿಸುವುದು.

ಈ) ಉದ್ದೇಶಿತ ಯೋಜನೆಯ ಅನುಷ್ಠಾನಕ್ಕೆ ಬಿಡುಗಡೆಯಾಗುವ ಅನುದಾನದಿಂದ ಅನುಮೋದಿತ ಪಾರ್ಟ್–ಎ **(Part-A)** ನಲ್ಲಿ ನಮೂದಿತವಾಗಿರುವ ಉಪಕರಣಗಳು ಮಾತ್ರ ಖರೀದಿಸುವುದು ಇದರಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.

ಉ) ಫಲಾನುಭವಿ ಸಂಸ್ಥೆಗೆ ಬಿಡುಗಡೆ ಮಾಡುವ ಅನುದಾನವನ್ನು ಅಗತ್ಯಕ್ಕೆ ಅನುಗುಣವಾಗಿ ನೀಡಲಾದ ಉದ್ದೇಶಕ್ಕೆ ಮಾತ್ರ ಬಳಸುವುದು ಹಾಗೂ ಸದರಿ ಅನುದಾನಕ್ಕೆ ಬರುವ ಬ್ಯಾಂಕ್ ಬಡ್ಡಿ ಮೊತ್ತವನ್ನು ಯಾವುದೇ ಕಾರಣಕ್ಕೂ ಉದ್ದೇಶಿತ ಯೋಜನೆಯ ಅನುಷ್ಠಾನಕ್ಕೆ ಬಳಸಿಕೊಳ್ಳಲು ಅನುಮತಿ/ಅವಕಾಶವಿರುವುದಿಲ್ಲ.

ಊ) ಫಲಾನುಭವಿ ಸಂಸ್ಥೆಗೆ ಬಿಡುಗಡೆ ಮಾಡುವ ಅನುದಾನಕ್ಕೆ ಬ್ಯಾಂಕಿನಿಂದ ಬರುವ ಕ್ರೋಢೀಕೃತ **(Accrued)** ಬಡ್ಡಿಯ ಮೊತ್ತವನ್ನು ಉಪಯೋಗಿತಾ ಪ್ರಮಾಣಪತ್ರದಲ್ಲಿ ಕಡ್ಡಾಯವಾಗಿ ನಮೂದಿಸುವುದು ಮತ್ತು ಸದರಿ ಬಡ್ಡಿಯ ಮೊತ್ತದ ದೃಢೀಕರಣಕ್ಕೆ ಬ್ಯಾಂಕ್ ಖಾತಾ ಪಾಸ್ ಪುಸ್ತಕದ ನೋಂದಣಿಯ ಪ್ರತಿಯನ್ನು **(Latest up-to-date bank passbook copy)** ಅಥವಾ ಬ್ಯಾಂಕಿನಿಂದ ಪಡೆದ ದೃಢೀಕೃತ ಪತ್ರವನ್ನು ಕಡ್ಡಾಯವಾಗಿ ನೀಡುವುದು.

ಋ) ಸದರಿ ಅನುದಾನದ ಬಿಡುಗಡೆಯ ದಿನದಿಂದಲೇ ಉದ್ದೇಶಿತ ಕಾರ್ಯಕ್ರಮವನ್ನು ಅನುಷ್ಠಾನಗೊಳಸಲು ಕ್ರಮ ಕೈಗೊಂಡು ಒಂದು ವರ್ಷದ ಕಾಲಮಿತಿಯೊಳಗೆ ಸದರಿ ಅನುದಾನವನ್ನು ಕಡ್ಡಾಯವಾಗಿ ನಿಯಮಾನುಸಾರ ಬಳಸಿಕೊಂಡು ಉದ್ದೇಶಿತ ಕಾರ್ಯಕ್ರಮದ ಧ್ಯೇಯೋದ್ದೇಶಗಳನ್ವಯ ಅನುಷ್ಠಾನಗೊಳಸುವುದು.

ಎ) ಉದ್ದೇಶಿತ ಯೋಜನೆ/ಕಾರ್ಯಕ್ರಮವನ್ನು ಕ್ರಿಯಾ ಯೋಜನೆಯಲ್ಲಿ ತಿಳಿಸಿರುವಂತೆ ಅನುಷ್ಠಾನಗೊಳಿಸಿ ನೋಂದಾಯಿತ ಲೆಕ್ಕಪರಿಶೋಧಕರಿಂದ ಆಡಿಟ್ ಮಾಡಿಸಿ ವಿತಂದಾಸದ/ಕೆಸ್ಟೆಪ್ಸ್ ಒದಗಿಸಿರುವ ನಮೂನೆಯ ಉಪಯೋಗಿತ ಪ್ರಮಾಣಪತ್ರವನ್ನು **GRF-19A** ನಲ್ಲಿ **(ದ್ವಿಪ್ರತಿಯಲ್ಲಿ)** ಮತ್ತು ಕಾರ್ಯಕ್ರಮದ ಪ್ರಗತಿಯ ವರದಿಯನ್ನು ಉದ್ದೇಶಿತ ಯೋಜನೆಯ ಅನುಷ್ಠಾನದ ಕಾಲಮಿತಿ ಮುಕ್ತಾಯಗೊಂಡ ಒಂದು ತಿಂಗಳ ಅವಧಿಯೊಳಗೆ ಕೆಸ್ಟೆಪ್ಸ್ ಸಂಸ್ಥೆಯ ವಿತಂದಾಸ ಕಚೇರಿಗೆ ನೀಡುವುದು.

Scanned with CamScanner

ಏ) ಉದ್ದೇಶಿತ ಯೋಜನೆಯ ಅನುಷ್ಠಾನಕ್ಕೆ ಬಿಡುಗಡೆಯಾಗುವ ಅನುದಾನಕ್ಕೆ ಬ್ಯಾಂಕಿನಿಂದ ಕ್ರೋಢೀಕೃತವಾಗುವ **(Accrued)** ಬಡ್ಡಿಯ ಮೊತ್ತವನ್ನು ಉಪಯೋಗಿತ ಪ್ರಮಾಣಪತ್ರದೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್ ಇವರ ಹೆಸರಿನಲ್ಲಿ ಚೆಕ್/ಡಿ.ಡಿ. ಮೂಲಕ ವಾಪಸ್ ನೀಡುವುದು.

ಐ) ಉದ್ದೇಶಿತ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾದ ದಾಖಲೆ ಪುಸ್ತಕವನ್ನು ನಿರ್ವಹಿಸುವುದು ಹಾಗೂ ಸಂಸ್ಥೆಯ ಮುಖ್ಯಸ್ಥರು ಮತ್ತು ಕಾರ್ಯಕ್ರಮ ಸಂಯೋಜಕರು ಯೋಜನೆಗೆ ಸಂಬಂಧಪಟ್ಟ ಎಲ್ಲಾ ಲೆಕ್ಕಪತ್ರಗಳನ್ನು ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಸಂರಕ್ಷಿಸಿಡುವುದು. ಅಲ್ಲದೆ, ಸರ್ಕಾರದ ಮಹಾಲೇಖಪಾಲಕರು ಅಥವಾ ಕೆಸ್ಟೆಪ್ಸ್ ಸಂಸ್ಥೆಯ ತಪಾಸಣೆ ಹಾಗೂ ಮೌಲ್ಯಮಾಪನಕ್ಕಾಗಿ ಕೋರಿದಾಗ ಸದರಿ ದಾಖಲೆಗಳನ್ನು ಒದಗಿಸುವುದು.

ಒ) ಕೆಸ್ಟೆಪ್ಸ್/ ವಿತಂದಾಸದ ಅಧಿಕಾರಿಗಳು ಕಾರ್ಯಕ್ರಮದ ಅನುಷ್ಠಾನ ಮತ್ತು ಪ್ರಗತಿಯ ಬಗ್ಗೆ ಫಲಾನುಭವಿ ಸಂಸ್ಥೆಗೆ ಭೇಟಿ ನೀಡಿದಾಗ ಅಗತ್ಯ ದಾಖಲೆಗಳನ್ನು ಮತ್ತು ಭೌತಿಕ ಪ್ರಗತಿಯ ವಿವರಗಳನ್ನು ಒದಗಿಸುವುದು.

ಶುಭಾಶಯಗಳೊಂದಿಗೆ,

ತಮ್ಮ ವಿಶ್ವಾಸಿ,

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

The Principal
Alva's Institute of Engineering and Technology
Shobhavana Campus, Mijar, Moodbidri
Dakshina Kannada-574 225

ಪ್ರತಿಗಳು:

1. Dr. Shashi Kumar K, Department of Engineering Physics, Alva's Institute of Engineering & Technology, Shobhavana Campus, Mijar, Moodbidri, Dakshina Kannada-574 225

2. ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ ವಿಭಾಗ, 7ನೇ ಮಹಡಿ, 4ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು- 01, ಇವರ ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ

PRINCIPAL
Alva's Institute of Engg. & Technology,
Mijar, MOODBIDRI - 574 225, D.K

Scanned with CamScanner

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ

'ವಿಜ್ಞಾನ ಭವನ' ನಂ. 24/2, 3ನೇ ಮಹಡಿ, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560070

ದೂರವಾಣಿ: 080-26711166 ಇ-ಮೇಲ್: ksteps.dst@gmail.com


ಸಂಖ್ಯೆ: ಕೆಸ್ಟೆಪ್ಸ್/ ವಿತಂದಾಸ /CISEE/GRD No. 931/2020-21/75 ದಿನಾಂಕ: ಆಗಸ್ಟ್ 26, 2021

ಇವರಿಗೆ:

ಡಾ|| ಶಶಿಕುಮಾರ್ ಕೆ,
ಹಿರಿಯ ಸಹಾಯಕ ಪ್ರಾಧ್ಯಾಪಕರು,
ಎಂಜಿನಿಯರಿಂಗ್ ಭೌತಶಾಸ್ತ್ರ ವಿಭಾಗ,
ಆಳ್ವಾ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ,
ಶೋಭಾವನ ಕ್ಯಾಂಪಸ್, ಮಿಜಾರ್, ಮೂಡುಬಿದಿರೆ,
ದಕ್ಷಿಣ ಕನ್ನಡ - 574 225.

ಮಾನ್ಯರೇ,

ವಿಷಯ: 2020-21ನೇ ಸಾಲಿನ ವಿತಂದಾಸ ಯೋಜನೆಯಡಿ ಪ್ರಸ್ತಾವನೆ ಆಯ್ಕೆಯಾಗಿರುವ ಬಗ್ಗೆ.

ಉಲ್ಲೇಖ: 1) ವಿತಂದಾಸ ಅರ್ಜಿ ಆಹ್ವಾನ ಜಾಹೀರಾತು ಸಂಖ್ಯೆ: DST/KSTePS/VGST/2020-21 ದಿನಾಂಕ: 21.01.2021

2) ಸರ್ಕಾರಿ ಆದೇಶ ಸಂಖ್ಯೆ: ಐಟಿ ಬಿಟಿ 185 ಎಸ್ ಟಿ ಎಸ್ 2021, ಬೆಂಗಳೂರು, ದಿನಾಂಕ: 25.08.2021

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ ರತ್ನ ಪ್ರೊ|| ಸಿ.ಎನ್.ಆರ್. ರಾವ್ ಎಫ್.ಆರ್.ಎಸ್., ರವರ ಅಧ್ಯಕ್ಷತೆಯಡಿ ರಚಿಸಲಾಗಿರುವ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ (ವಿತಂದಾಸ) ಶಿಫಾರಸ್ಸಿನ ಆಧಾರದ ಮೇಲೆ 2020-21ನೇ ಸಾಲಿನ ವಿತಂದಾಸದ ವಿಜ್ಞಾನ ಮತ್ತು ಇಂಜಿನಿಯರಿಂಗ್ ಶಿಕ್ಷಣದ ಸೃಜನಶೀಲ ಕೇಂದ್ರಗಳ ಸ್ಥಾಪನೆ (CISEE) ಯೋಜನೆಯಡಿ ತಾವು ಸಲ್ಲಿಸಿದ್ದ **"Monitoring Food Adulteration in Liquid Dietary Produce Using Earth's Field Nuclear Magnetic Resonance (EFNMR) Spectroscopy as a Non-Destructive Testing (NDT) Tool"** ಶೀರ್ಷಿಕೆಯ ಪ್ರಸ್ತಾವನೆಯು ಆಯ್ಕೆಗೊಂಡು ಸರ್ಕಾರದಿಂದ ಅನುಮೋದನೆಗೊಂಡಿರುತ್ತದೆ ಎಂದು ತಿಳಿಸಲು ಹರ್ಷಿಸುತ್ತೇನೆ.

ವಿವಿಧ ಯೋಜನೆಯಡಿ ಆಯ್ಕೆಯಾದ ಸಂಸ್ಥೆ/ಪ್ರಸ್ತಾವನೆಗೆ ಸರ್ಕಾರದಿಂದ ಒದಗಿಸಲಾಗುವ ಅನುದಾನದ ವಿವರವನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ.

ಈ ನಿಟ್ಟಿನಲ್ಲಿ, ಈ ಕೆಳಕಂಡ ದಾಖಲೆಗಳನ್ನು ವಿತಂದಾಸ ಕಛೇರಿಗೆ (ನಂ: 702, 7ನೇ ಮಹಡಿ, 4ನೇ ಹಂತ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವೀದಿ, ಬೆಂಗಳೂರು-560001) ಸಲ್ಲಿಸಲು ಸೂಚಿಸಿದೆ.

1) PPMS ನಲ್ಲಿ ಅರ್ಜಿಯೊಂದಿಗೆ ಸಲ್ಲಿಸಲಾಗಿರುವ ಸಂಬಂಧಪಟ್ಟ ಪ್ರಾಧಿಕಾರದ ಸಹಿಯಿರುವ ಕೆಳಕಂಡ ದಾಖಲೆಗಳು:
   a) ಪ್ರಸ್ತಾವನೆ ಯ ಮೂಲ ಪ್ರತಿ – **2 ಪ್ರತಿಗಳು**
   b) Part-A ದಾಖಲೆಯ ಮೂಲ ಪ್ರತಿ (**ಅನುಬಂಧ-1** ರಲ್ಲಿ ನೀಡಲಾಗಿರುವ ಅನುದಾನದ ವಿವರಕ್ಕೆ ಹೊಂದುವಂತೆ ಇರತಕ್ಕದ್ದು)
   c) Undertaking letter ಮತ್ತು ಸಂಸ್ಥೆಯಿಂದ ನೀಡಲಾಗಿರುವ Endorsement Letter ನ ಮೂಲ ಪ್ರತಿಗಳು
   d) ಸಂಶೋಧನಾ ಲೇಖನಗಳ (Publications) ಪ್ರತಿ, CV ಮತ್ತು ಇತರೆ ಸಂಬಂಧಪಟ್ಟ ದಾಖಲೆಗಳು

2) ಅಫಿಡವಿಟ್ (**ಅನುಬಂಧ-2** ರಲ್ಲಿ ನೀಡಲಾಗಿರುವ ನಮೂನೆಯಲ್ಲಿ ರೂ. 100/- ರ ಛಾಪಾ ಕಾಗದದ ಮೇಲೆ ನೀಡತಕ್ಕದ್ದು).

Scanned by CamScanner

3) ಸಂಸ್ಥೆಯ ಮುಖ್ಯಸ್ಥರ ಲೆಟರ್ ಹೆಡ್ ನಲ್ಲಿ ಅನುದಾನ ಬಿಡುಗಡೆಗೆ ಸಂಸ್ಥೆಯ ಬ್ಯಾಂಕ್ ಖಾತೆಯ ಕೆಳಕಂಡ ವಿವರ (ಸಂಸ್ಥೆಯ ಮುಖ್ಯಸ್ಥರ ಖಾತೆಯ ವಿವರವನ್ನು ಮಾತ್ರ ನೀಡತಕ್ಕದ್ದು):

ಖಾತೆಯ ಹೆಸರು:
ಖಾತೆಯ ಸಂಖ್ಯೆ:
ಬ್ಯಾಂಕ್ ನ ಹೆಸರು ಮತ್ತು ಶಾಖೆ:
IFSC ಸಂಖ್ಯೆ:

ಮುಂದುವರಿದು, ತಮ್ಮ ಯೋಜನೆಯ **ಜಿ. ಆರ್. ಡಿ. ಸಂಖ್ಯೆ 931** ಆಗಿದ್ದು, ಮುಂದಿನ ಎಲ್ಲಾ ಪತ್ರ ವ್ಯವಹಾರಗಳಿಗೆ ಈ ಸಂಖ್ಯೆಯನ್ನು ತಪ್ಪದೇ ನಮೂದಿಸಲು ಸೂಚಿಸಿದೆ.

**ಈ ಎಲ್ಲಾ ದಾಖಲೆಗಳನ್ನು ದಿನಾಂಕ: 8ನೇ ಸೆಪ್ಟೆಂಬರ್, 2021 ರೊಳಗಾಗಿ ವಿತಂದಾಸ ಕಛೇರಿಗೆ ಸಲ್ಲಿಸಲು ಕೋರಿದೆ.** ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ: 080-2203-2013/ ಇಮೇಲ್: visiongroup.st@gmail.com ನ್ನು ಸಂಪರ್ಕಿಸಬಹುದು.

ಧನ್ಯವಾದಗಳೊಂದಿಗೆ,

26/08

ನಿರ್ದೇಶಕರು (ತಾಂತ್ರಿಕ), ವಿತಂಇ/
ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್

ಪ್ರತಿ:

1) ಪ್ರಾಂಶುಪಾಲರು, ಆಳ್ವಾ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ, ಶೋಭಾವನ ಕ್ಯಾಂಪಸ್, ಮಿಜಾರ್, ಮೂಡುಬಿದಿರೆ, ದಕ್ಷಿಣ ಕನ್ನಡ - 574 225.
2) ಡಾ|| ರಾಮಪ್ರಸಾದ್. ಎ. ಟಿ, ಹಿರಿಯ ಸಹಾಯಕ ಪ್ರಾಧ್ಯಾಪಕರು (Co-PI), ಎಂಜಿನಿಯರಿಂಗ್ ಭೌತಶಾಸ್ತ್ರ, ವಿಭಾಗ, ಆಳ್ವಾ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ, ಶೋಭಾವನ ಕ್ಯಾಂಪಸ್, ಮಿಜಾರ್, ಮೂಡುಬಿದಿರೆ, ದಕ್ಷಿಣ ಕನ್ನಡ - 574 225.
3) ಸರ್ಕಾರದ ಜಂಟಿ ಕಾರ್ಯದರ್ಶಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕೊಠಡಿ ಸಂಖ್ಯೆ: 305, 5ನೇ ಮಹಡಿ, 5ನೇ ಹಂತ, ಬಹುಮಹಡಿ ಕಟ್ಟಡ, ಡಾ|| ಅಂಬೇಡ್ಕರ್ ವೀದಿ, ಬೆಂಗಳೂರು – 560 001.
4) ಕಛೇರಿ ಪ್ರತಿ.

PRINCIPAL
Alva's Institute of Engg. & Technology,
Mijar, MOODBIDRI - 574 225, D.K

Scanned by CamScanner